# ಬಾಚಿಕಾಯಕದ ಕಾಳವ್ವೆಯ ವಚನದಲ್ಲಿ ಕಾಯಕ, ಮಾತು ಮತ್ತು ವ್ರತ ಪ್ರಜ್ಞೆ

**ಲಕ್ಷ್ಮಿದೇವಿ ಎನ್.**

ಸಂಶೋಧನಾ ವಿದ್ಯಾರ್ಥಿ, ಸಿ.ಎಂ.ಆರ್. ವಿಶ್ವವಿದ್ಯಾಲಯ, ಬೆಂಗಳೂರು.

**Received: 13-02-2024 ; Acepted: 03-06-2024 ; Published: 09-07-2024**

**DOI: https://doi.org/10.5281/zenodo.12672873**

**ABSTRACT:**

ವಚನಗಳಲ್ಲಿ ನಾವು ವಿಚಾರ ಸ್ವಾತಂತ್ರ್ಯದ ಪರಾಕಾಷ್ಟೆಯನ್ನು ಕಾಣುತ್ತೇವೆ. “ಉದರ ನಿಮಿತ್ತಂ ಬಹುಕೃತ ವೇಷಂ” ಎಂಬ ಮಾತೊಂದಿದೆ. ಹೊಟ್ಟೆ ಹೊರೆಯುವುದಕ್ಕಾಗಿ ಮಾನವ ಅನೇಕ ವೇಷಗಳನ್ನು ಕೈಗೊಳ್ಳುತ್ತಾನೆ. ಆದರೆ ಶರಣರು ಹೊಟ್ಟೆ ಹೊರೆಯುವ ಕಾಯಕದ ಮೂಲಕ ದಾಸೋಹ ಸಿದ್ಧಾಂತವನ್ನು ಅನುಭಾವದ ಮೂಲಕ ಸಮಾಜಕ್ಕೆ ಸಾರಿದವರು. ಅಸಮಾನತೆಯ ಸಮಾಜದಲ್ಲಿ ಶೂದ್ರರಿಗೆ, ಅಸ್ಪೃಶ್ಯರಿಗೆ, ಹೆಣ್ಣಿಗೆ ಸಮಾನ ಸ್ಥಾನಮಾನವನ್ನು ತಂದುಕೊಟ್ಟ ಕೀರ್ತಿ ಬಸವಣ್ಣನರಿಗೆ ಸಲ್ಲುತ್ತದೆ. ೧೨ನೇ ಶತಮಾನದ ಸಮಾಜದಲ್ಲಿ ಅಕ್ಷರ ಕ್ರಾಂತಿಯ ಮೂಲಕ ಸ್ತ್ರೀ-ಪುರುಷ ಸಮಾನತೆಯನ್ನು ಪಡೆದದ್ದು ಪವಾಡವೇ ಸರಿ. ಅದರಲ್ಲೂ ನಾಲ್ಕು ಗೋಡೆಗಳಿಗೆ ಸೀಮಿತವಾಗಿದ್ದ ಮಹಿಳೆ ಅನುಭವ ಮಂಟಪದ ಗೋಷ್ಠಿಯಲ್ಲಿ ಪುರುಷನಷ್ಟೇ ಸಮಾನತೆಯನ್ನು ಕೈಗೊಂಡಿದ್ದು ಸಮಾಜಿಕ ಕ್ರಾಂತಿ ಎನ್ನಬಹುದು. ಅವರಲ್ಲಿ ಒಬ್ಬರು ಬಾಚಿ ಕಾಯಕದ ಬಸವಯ್ಯಗಳವರ ಪುಣ್ಯಸ್ತ್ರೀ ಕಾಳವ್ವೆ. ಈಕೆಯ ಎರಡು ವಚನಗಳು ಮಾತ್ರ ನಮಗೆ ದೊರೆತ್ತಿದ್ದು, ಈಕೆಯ ಕಾಲ ೧೧೬೦ ಬಸವಣ್ಣನವರ ಸಮಕಾಲೀನರಾದ ಈಕೆಯ ಎರಡೂ ವಚನಗಳು ಕಾಯಕ, ವ್ರತ ಹಾಗೂ ಮಾತಿನ ಮಹತ್ವವನ್ನು ಸಮಾಜಕ್ಕೆ ಸಾರುತ್ತದೆ. ಈಕೆಯ ಅಂಕಿತನಾಮ ಕರ್ಮಹರ ಕಾಳೇಶ್ವರ. ಪ್ರತಿಯೊಬ್ಬ ಮನುಷ್ಯ ಸಮಾಜದಲ್ಲಿ ಜೀವನ ನಡೆಸಬೇಕಾದರೆ ಯಾವುದಾದರೂ ಒಂದು ಕಾಯಕದಲ್ಲಿ ತೊಡಗಿರಲೇ ಬೇಕು. ಕಾಯಕದಲ್ಲಿ ಮೇಲಿಲ್ಲ-ಕೀಳಿಲ್ಲ. ಆದರೆ ಮಾಡುವ ಕಾಯಕ ಮಾತ್ರ ಶಿವನಿಗೆ ಮೆಚ್ಚುವಂತಿರಬೇಕು. ಅಷ್ಟೇ ಅಲ್ಲ ವ್ರತವೆಂದರೆ ಪೂಜೆಯಲ್ಲ, ನಮ್ಮ ನಡತೆ, ಆಚರಣೆ, ಭಕ್ತಿ, ಪ್ರತಿಜ್ಞೆ ಹಾಗೂ ಪಾಪಕರ್ಮಗಳಿಂದ ದೂರವಿರುವುದು ವ್ರತವನ್ನು. ಆಚರಿಸಬೇಕೆಂದರೆ ನಮ್ಮ ಮನಸ್ಸು ಶದ್ಧವಾಗಿದ್ದರೆ ಮಾತ್ರ ಸಾಧ್ಯವಾಗುವುದು. ಕಾಯಕ ತಪ್ಪಿದಡೆ ಸೈರಿಸಬಾರದು. ವ್ರತ ತಪ್ಪಲೆಂತೂ ಸೈರಿಸಬಾರದು. ಕಾಳವ್ವೆಯ ಈ ವಚನದಂತೆ ಕಾಯಕವೆಷ್ಟು ಮಹತ್ವವೋ ಅದಕ್ಕಿಂತಲೂ ಹೆಚ್ಚು ಮಹತ್ವದ್ದು ವ್ರತ. ಆದ್ದರಿಂದಲೆ, ವ್ರತವನ್ನು ಆಚರಿಸುವುದು ಅಷ್ಟು ಸುಲಭವಲ್ಲ. ಮಾತು ಮನುಷ್ಯನ ಗೌರವವನ್ನು ಸೂಚಿಸುತ್ತದೆ. ಆದ್ದರಿಂದಲೇ ಜನಪದರ ನಾಣ್ನುಡಿಯಂತೆ ಮಾತು ಆಡಿದರೆ ಹೋಯಿತು ಮುತ್ತು ಒಡೆದರೆ ಹೋಯಿತು ಎನ್ನುತ್ತಾರೆ. ಮಾತು ತಪ್ಪಿ ನುಡಿಯಲು ಬಾಯಿಗೆ ಮೂಲ ಎನ್ನುವ ಕಾಳವ್ವೆಯ ಈ ವಚನ ಮಾತೇ ಮುತ್ತು ಮಾತೇ ಮೃತ್ಯು ಎನ್ನುವಂತಿದೆ. ಮನುಷ್ಯನ ಅಂದವನ್ನು ಹೆಚ್ಚಿಸುವ ಸಾಧನಗಳಲ್ಲಿ ಮಾತಿಗೆ ಮೊದಲ ಸ್ಥಾನವಿದೆ. ಬಾಚಿಕಾಯಕದ ಕಾಳವ್ವೆಯ ವಚನಗಳು ಎರಡೇ ಆದರೂ, ಮನುಷ್ಯನ ಮಾತಿನಿಂದ ಪ್ರಾರಂಭವಾಗಿ, ಕಾಯಕದ ಮಹತ್ವವನ್ನು ತಿಳಿಸಿ, ಕಾಯಕಕ್ಕಿಂತಲೂ ವ್ರತದ ಶ್ರೇಷ್ಠತೆನ್ನು ತಿಳಿಸುವಲ್ಲಿ ಮುಕ್ತಾಯವಾಗುತ್ತದೆ.

**KEYWORDS:**

ಕಾಯಕ, ಮಾತು, ವ್ರತ, ಶರಣ, ಕಾಳವ್ವೆ , ಬಾಚಿಕಾಯಕ, ವಚನ ಸಾಹಿತ್ಯ.

ನಮ್ಮ ಭಾರತೀಯ ಸಂಸ್ಕೃತಿಯ ವರ್ಣಾವಸ್ಥೆಯಲ್ಲಿ ಮೂಢನಂಬಿಕೆಗಳು, ಗೊಡ್ಡು ಸಂಪ್ರದಾಯಗಳು, ಬಹುದೇವತೋಪಸನ, ಸ್ತ್ರೀ ಶೋಷಣೆಯಂತೂ ಹೇಳಾತೀರದು. ಅದರಲ್ಲೂ ಸ್ತ್ರೀಯನ್ನು ಕೇವಲ ಭೋಗದ ಗೊಂಬೆಯನ್ನಾಗಿ ಮಾಡಿ ಕೊಂಡಿದ್ದ ನಮ್ಮ ಸಮಾಜ ಅವಳಿಗೆ ಯಾವುದೇ ಧರ್ಮ ಸಂಸ್ಕಾರವಿಲ್ಲವೆನ್ನುವಂತೆ ನೋಡಿಕೊಳ್ಳುತ್ತಿದ್ದರು. ವಿಧವೆಯರನ್ನು ಅಮಾನುಷವಾಗಿ ಕಾಣುತ್ತಿದ್ದ ಕಾಲವದು. ಇಂತಹ ಸಂಧರ್ಭದಲ್ಲಿ ಬಡವರು, ಶೋಷಿತರು, ಸ್ತ್ರೀಯರು, ನೊಂದವರು ತಮ್ಮನ್ನು ಉದ್ಧರಿಸುವ ಮಹಾಪುರುಷನ ಆಗಮನಕ್ಕಾಗಿ ಕಾಯುತ್ತಿದ್ದ ಕಾಲವದು. ಅದರಲ್ಲೂ, ಕಾಯಕ ವರ್ಗದ ಜನರಿಗೆ ಸರಿಯಾದ ಗೌರವ ನೀಡದೆ ಇರುವಂತಹ ಕಾಲ. ಅಂತಹ ಸಮಯದಲ್ಲಿ ಕಾಯಕದ ಸಮಾನತೆಯ ಬಗ್ಗೆ ಅಂದಿನ ಜನರಿಗೆ ಸಂಪೂರ್ಣ ತಿಳುವಳಿಕೆ ಕೊಡುವ ಕಾಯಕ ಶ್ರೇಷ್ಠತೆಯ ಪ್ರಜ್ಞೆಯನ್ನು ಪ್ರತಿಯೊಬ್ಬ ಶರಣರ ಹೃದಯ ಮಂದಿರದಲ್ಲಿ ತುಂಬಿ ಕಾಯಕದ ಗೌರವ ಮೌಲ್ಯಗಳನ್ನು ತಿಳಿಸಿ ಕಲ್ಯಾಣ ಕ್ರಾಂತಿಗೆ ಕಾರಣ ಕರ್ತರಾದವರು ಜಗಜ್ಯೋತಿ ಬಸವಣ್ಣನವರು. ಇವರೊಂದಿಗೆ ಕೈ ಜೋಡಿಸಿದವರು ಶಿವಶರಣರು. ಶಿವಶರಣರ ಕಾಯಕದಲ್ಲಿ ಯಾವುದು ಕೀಳಲ್ಲ, ಯಾವುದು ಮೇಲಲ್ಲ. ಇಂತಹ ಕಾಯಕ ಯೋಗಿಗಳಲ್ಲಿ ಒಬ್ಬರಾದ ಬಾಚಿಕಾಯಕದ ಬಸವಯ್ಯ ಅಂದರೆ ಮರಗೆಲಸ ಮಾಡುತ್ತಿದ್ದ ಬಸವಯ್ಯ ಇವರ ಪುಣ್ಯಸ್ತ್ರೀ ಕಾಳವ್ವೆ. ಕಾಲ ಸುಮಾರು ೧೧೬೦. ಈಕೆಯ ಎರಡು ವಚನಗಳು ಮಾತ್ರ ನಮಗೆ ದೊರೆತ್ತಿದ್ದು, ಈಕೆಯು ಕರ್ಮಹರ ಕಾಳೇಶ್ವರ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾಳೆ.

ತನ್ನ ವೃತ್ತಿ ಪರಿಭಾಷೆಯನ್ನು ಬಳಸಿಕೊಂಡು ರಚಿಸಿರುವ ಈಕೆಯ ವಚನ ಹೀಗಿದೆ.

**ಕಾಯಕ ತಪ್ಪಿದಡೆ ಸೈರಿಸಬಾರದು**
**ವ್ರತ ತಪ್ಪಲೆಂತೂ ಸೈರಿಸಬಾರದು ಕರ್ಮಹರ ಕಾಳೇಶ್ವರಾ||(೧೯೦)**

ಈಕೆಯ ಈ ವಚನದಲ್ಲಿ ಕಾಯಕದ ತಲ್ಲೀನತೆ ಎಂದರೆ, ನಾವು ಮಾಡುವ ಕೆಲಸ ಮಾತ್ರವಲ್ಲ ಎನ್ನುತ್ತಾಳೆ. ವಚನ ಚಿಕ್ಕದು. ಬಳಸಿರುವ ಪದಗಳು ಕಡಿಮೆ. ಆದರೆ ಅರ್ಥಗಳು ಮಾತ್ರ ವಿಶಾಲವಾದುದು. ನಮ್ಮ ಕಾಯಕದಲ್ಲಿ ನಾವು ಎಚ್ಚರಿಕೆಯಿಂದ ತಲ್ಲೀನರಾಗಬೇಕು ನಾವು ಆಡುವ ಪ್ರತಿಯೊಂದು ಮಾತು ಪ್ರಜ್ಞಾವಂತಿಕೆಯಿಂದ ಕೂಡಿರಬೇಕು. ವ್ರತ ತಪ್ಪಿದರಂತೂ ಎಂದರೆ ಕೇವಲ ಪೂಜೆಯಲ್ಲ, ನಮ್ಮ ನಡವಳಿಕೆ, ಆಚಾರ, ವಿಚಾರ ನಮ್ಮ ಜೀವನದಲ್ಲಿ ನಡೆಸಿಕೊಂಡು ಬಂದಂತಹ ನಿಯಮಗಳು. ನಮ್ಮ ಶೀಲ, ನಡೆತೆ ಎಲ್ಲವನ್ನು ಒಳಗೊಳ್ಳುತ್ತದೆ. ಹನ್ನೆರಡನೇ ಶತಮಾನದಲ್ಲಿ ಬಸವಾದಿ ಶರಣರು ರಚಿಸಿದ ವಚನಗಳು ವೈಚಾರಿಕವಾಗಿಯೂ, ಆಧ್ಯಾತ್ಮಿಕವಾಗಿಯೂ, ಉತ್ಕೃಷ್ಟವಾದವು. ವರ್ತಮಾನ ಸಮಾಜವು ಎದುರಿಸುತ್ತಿರುವ ಅನೇಕ ಗೊಂದಲಗಳಿಗೆ ಇಲ್ಲಿ ಸಮರ್ಪಕ ಉತ್ತರವಿದೆ.

ವ್ರತದ ಬಗ್ಗೆ ಬಾಚಿ ಕಾಯಕದ ಕಾಳವ್ವೆಯ ದೊರೆತ ಎರಡು ವಚನಗಳಲ್ಲಿ ವ್ರತದ ವಿಚಾರವಿದೆ. ಇಲ್ಲಿ ವ್ರತ ಎಂದರೇನು? ಎನ್ನುವ ಪ್ರಶ್ನೆಗೆ ಸ್ತ್ರೀ ಪುರುಷ ಹಬ್ಬ ಹರಿದಿನಗಳ ನಿರ್ಧಿಷ್ಟ ಋತುಮಾನಗಳಲ್ಲಿ ದೇವರ ಹೆಸರಿನಲ್ಲಿ ನಡೆಸುವ ನೇಮ, ನಿಷ್ಠೆಗಳನ್ನು ವ್ರತ ಎನ್ನುವುದರ ಮೂಲಕ ಆಚರಿಸುವುದುಂಟು. ಇದರಲ್ಲಿ ಬಹುಪಾಲು ಮೂಢನಂಬಿಕೆಗಳೇ.

ಆದರೆ ಶರಣರ ಪ್ರಕಾರ ನೈತಿಕವಾದ, ಸತ್ಯ ಶುದ್ಧವಾದ ಬದುಕೇ ವ್ರತ. ನುಡಿದಂತೆ ನಡೆಯುವುದೇ ವ್ರತ. ವ್ರತವೆಂದರೆ ಶೀಲ, ಗುರು, ಲಿಂಗ, ಜಂಗಮನನ್ನು ದೂಷಿಸದಿರುವುದೇ ವ್ರತ. ವಿಶ್ವ ಮಾನವತಾವಾದಿ ಬಸವಣ್ಣನವರು ಹೇಳುವಂತೆ ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ಇದಿರ ಹಳಿಯಲು ಬೇಡ, ತನ್ನ ಬಣ್ಣಿಸಬೇಡ, ಎನ್ನುವ ಸಪ್ತ ಸೂತ್ರಗಳನ್ನು ಹೇಳಿ, ಇದೇ ಅಂತರಗ ಶುದ್ಧಿ, ಇದೇ ಬಹಿರಂಗ ಶುದ್ಧಿ ಇದೇ ನಮ್ಮ ಕೂಡಲ ಸಂಗಮದೇವರ ನೊಲಿಸುವ ಪರಿ ಎನ್ನುತ್ತಾರೆ. ಸತ್ಯ ಶುದ್ಧ ನಡೆ- ನುಡಿಯ ವ್ರತ ಪ್ರಾಣಕ್ಕಿಂತ ಮಿಗಿಲಾದುದು. ಇಂದು ಜನರು ತಮ್ಮ ಆಸೆ ಅಭಿಲಾಷೆಗಳ ಈಡೇರಿಕೆಗಾಗಿ ದೇವರುಗಳಿಗೆ ಹರಕೆಯ ವ್ರತ ಮಾಡುತ್ತಾರೆ. ಉಪವಾಸದ ವ್ರತ, ನವಗ್ರಹ ಸುತ್ತುವ ವ್ರತ, ಅಶ್ವಥ ವೃಕ್ಷದ ಪ್ರದಕ್ಷಿಣೆ ಹಾಕುವುದು, ಹೆಜ್ಜೆ ನಮಸ್ಕಾರ, ಮಕ್ಕಳಾಗದಿದ್ದರೆ ಸರ್ಪದೋಷ ನಿವಾರಣೆ ವ್ರತ, ಮೌನ ವ್ರತ, ವರಲಕ್ಷ್ಮಿ ವ್ರತ, ಗಣೇಶ ವ್ರತ, ಮಾಡಿದ ಪಾಪ ಕಳೆಯಲು ವ್ರತ ಇನ್ನೂ ಮುಂತಾದವು. ಆದರೆ ವಚನಕಾರರ ಪ್ರಕಾರ ವ್ರತವೆಂದರೆ ಮನಸ್ಸಿನ ನೆಮ್ಮದಿಗಾಗಿ ಮನುಷ್ಯತ್ವದ ನೆಲೆಯಲ್ಲಿ ವಿಚಾರವಂತರಾಗಿ ಬದುಕುವುದು.

ದೇಹ ದಂಡನೆಯಾಗಲೀ, ಹಿಂಸೆಯಾಗಲೀ, ಬೇರೆಯವರಿಗೆ ತೊಂದರೆ ಕೊಡುವ ಮೂಢ ನಂಬಿಕೆಯಾಗಲಿ ವ್ರತಕ್ಕೆ ಸೇರುವುದಿಲ್ಲ. ೧೨ನೇ ಶತಮಾನದ ಅಪ್ರಸಿದ್ಧ ವಚನಗಾರ್ತಿಯಲ್ಲಿ ಬಾಚಿಕಾಯಕದ ಕಾಳವ್ವೆ ಕೂಡ ಒಬ್ಬರು. ನವ ಜಾಗೃತಿ, ಸಾಕ್ಷರೆಯ ಅರಿವು, ಸಂಸಾರದ ಸತ್ಯ ಅರಿತು ಬದುಕಿನ ಶುದ್ಧತೆಗಾಗಿ ಹಂಬಲಿಸಿದ ಈಕೆ ವ್ರತಾಚಾರಣೆ, ಕುಲಭೇಧ, ಭಕ್ತಿ, ಜ್ಞಾನ, ನೀತಿ ನಿಯಮಗಳ ಸ್ಪಷ್ಟ ನಿಲುವು ಹೊಂದಿದ್ದಳು. ಕಾಳವ್ವೆಯ ಪ್ರಕಾರ ಕಾಯಕ ತಪ್ಪಿದರೂ ಅದನ್ನು ಸಹಿಸಿ ಕೊಳ್ಳಬಹುದು. ಆದರೆ ಇಲ್ಲಿ ಕಾಳವ್ವೆ ಕಾಯಕಕ್ಕಿಂತ ಮುಖ್ಯವಾದುದು ನಮ್ಮ ವ್ರತ. ಒಬ್ಬ ಮನುಷ್ಯ, ಮನುಷ್ಯ ಜೀವಿಯಾಗಿ ಬದುಕಬೇಕಾದರೆ ಸಮಾಜಕ್ಕೆ ಅವನಿಂದ ಯಾವುದೇ ಕೆಡಕಾಗಬಾರದು. ಸಮಾಜಕ್ಕೆ ಕೆಡಕಾಗಬಾರದೆಂದರೆ ಅವನ ನಡತೆ, ನಡವಳಿಕೆ, ಆಚಾರ-ವಿಚಾರಗಳು ಸಮಾಜ ಮುಖಿಯಾಗಿರಬೇಕು. ಸಮಾಜ ವಿರೋಧಿಯಾದರೆ ಆತ ಕಾಯಕದಲ್ಲಿ ಎಷ್ಟೇ ಪ್ರಮಾಣಿಕನಾದರೂ ಆತನ ಬಹಿರಂಗ ಶುದ್ಧವಿಲ್ಲದ ಕಾರಣ ಆತನನ್ನು ಸಹಿಸಿಕೊಳ್ಳಬಾರದು. ಮನುಷ್ಯನ ವ್ಯಕ್ತಿತ್ವ ವಿಕಸನ ಕೇವಲ ಕಾಯಕ ಮಾತ್ರದಿಂದಲೇ ಸಾಧ್ಯವಿಲ್ಲ. ಈ ವಚನದಲ್ಲಿ ಈಕೆ ಎಲ್ಲಿಯೂ ತನ್ನ ಧರ್ಮ, ಇಷ್ಟಲಿಂಗ, ಧಾರ್ಮಿಕ ಆಚರಣೆ, ತತ್ತ್ವಜ್ಞಾನ, ಆತ್ಮಜ್ಞಾನ, ಅನುಭಾವ ಮುಂತಾದ ದೊಡ್ಡ ದೊಡ್ಡ ಮಾತುಗಳನ್ನು ಆಡಿರುವುದಿಲ್ಲ. ಬದಲಾಗಿ ಎರಡು ಸಣ್ಣ ವಾಕ್ಯಗಳು, ಕೆಲವೇ ಪದಗಳನ್ನು ಬಳಸಿದ್ದಾರೆ.

ಈ ಪದಗಳೇ ಕಾಯಕದ ಶ್ರೇಷ್ಠತೆಗೆ ಮತ್ತು ಮಾನವನು ಎಚ್ಚರಿಕೆಯಿಂದ ಬಾಳಬೇಕಾದ ರೀತಿಯನ್ನು ತಿಳಿಸುತ್ತದೆ. ಈಕೆಯ ಎಚ್ಚರಿಕೆಯ ಮಾತುಗಳ ಈ ವಚನ ಇಂದಿನ ಆಧುನಿಕ ಸಮಾಜಕ್ಕೆ ಹಿಡಿದ ಕೈಗನ್ನಡಿಯಾಗಿದೆ ಎಂದರೆ ತಪ್ಪಾಗಲಾರದು. ಕಾಯಕ ತಪ್ಪಿದಡೆ, ಸೈರಿಸಬಹುದು, ವ್ರತ ತಪ್ಪಲೆಂತೂ ಸೈರಿಸಬಾರದು ಎನ್ನುವ ಈ ವಚನ ಕಾಯಕ ಪ್ರಜ್ಞೆಯನ್ನು ಕಳೆದುಕೊಂಡಿರುವ ಇಂದಿನ ಸಮಾಜದ ಜನಾಂಗ ಕೇವಲ ಸಂಬಳಕ್ಕಾಗಿ ದುಡಿಯುವಂತಿದೆ. ಕಾಯಕ ಪ್ರಜ್ಞೆಯನ್ನು ಕಳೆದು ಕೊಂಡಿರುವವರು

ಮನಸ್ಸಿಲ್ಲದ ಮನಸ್ಸಿನಿಂದ ಕೆಲಸ ಮಾಡುತ್ತಿರುವುದರಿಂದ, ಕೆಲಸ ಮಾಡುವರ ಸಂಖ್ಯೆ ಹೆಚ್ಚುತ್ತಿದೆಯೇ ವಿನಃ ಅಂಥವರಿಂದ ಎಲ್ಲಾ ರಂಗಗಳಲ್ಲೂ ಅಭಿವೃದ್ಧಿ ಕುಂಠಿತವಾಗಿದೆ ಎಂದೇ ಹೇಳಬಹುದು. ಇಂತವರಿಂದ ಜೀವನದ ಮೌಲ್ಯಗಳು ಕಡಿಮೆಯಾಗಿರುವುದರಿಂದಲೇ ಕೋಮು ಗಲಭೆಗಳೂ, ಜಾತಿ ಸಂಘರ್ಷಗಳು ಹೆಚ್ಚುತ್ತಿವೆ. ಅಷ್ಟೇ ಅಲ್ಲದೆ, ಸಮಾಜದಲ್ಲಿ ಅನೈತಿಕ ಚಟುವಟಿಕೆಗಳಿಗೆ ಕಡಿವಾಣವೇ ಇಲ್ಲದಂತಾಗಿದೆ. ಇಂದಿನ ಆಧುನಿಕ ವಿಜ್ಞಾನ-ತಂತ್ರಜ್ಞಾನ ಯುಗದಲ್ಲೂ ಅಭಿವೃದ್ಧಿ ಎನ್ನವುದು ಹಿಮ್ಮುಖವಾಗಿದೆ. ಇದನ್ನು ನಾವು ಅದೋನ್ನತಿ ಎನ್ನಬಹುದು. ಈ ಕಾರಣದಿಂದಲೇ ಕಾಳವ್ವೆ ವ್ರತಕ್ಕೆ ಬಹಳಷ್ಟು ಮಹತ್ವ ಕೊಡುತ್ತಾಳೆ.

ವ್ರತವೆಂದರೆ, ಕೇವಲ ನೇಮವಲ್ಲ ಅಂದರೆ ಶಾಸ್ತ್ರೋಕ್ತವಾಗಿ ಮಾಡುವ ಪೂಜೆಯಲ್ಲ ಬದಲಾಗಿ ನಮ್ಮ ಆಚಾರ, ವಿಚಾರ, ನಡೆತೆಯ ಮೂಲಕ ಒಳಗಣ್ಣಿನಿಂದ ದೇವರನ್ನು ಕಾಣುವ ಕ್ರಮ. ಆದ್ದರಿಂದಲೇ ಕಾಯಕ ತಪ್ಪಿದರೆ ಸಹಿಸಬಹುದು ವ್ರತ ತಪ್ಪಿದರಂತೂ, ಇನ್ನೂ ಸಹಿಸಬಾರದು. ಕಾಯಕವೂ ಮುಖ್ಯ. ವ್ರತವು ಕಾಯಕಕ್ಕಿಂತಲೂ ಮುಖ್ಯ. ಕಾಯಕಕ್ಕೆ ಇಷ್ಟು ಚಿಕ್ಕ ವಚನದ ಮೂಲಕ ಮಹತ್ವ ಕೊಡುವ ಕಾಳವ್ವೆ ಬಾಚಿ ಕಾಯಕದ ಬಸವಪ್ಪನವರ ಪುಣ್ಯಸ್ತ್ರೀ. ಇವರು ಬೀದರ ಜಿಲ್ಲೆಯ ಬಸವ ಕಲ್ಯಾಣ ತಾಲ್ಲೂಕಿನ ರಾಜೇಶ್ವರ ಗ್ರಾಮದವರು. ಬಸವಯ್ಯನ ವಚನಗಳ ಅಂಕಿತದಿಂದಲೇ ಈತನ ಊರಿನ ಮಾಹಿತಿ ಸಿಗುತ್ತದೆ. "ಬಸವಪ್ರಿಯ ವಿಶ್ವ ಕರ್ಮಟಕ್ಕೆ ಕಾಳಿಕಾ ವಿಮಲ ರಾಜೇಶ್ವರ ಲಿಂಗ" ಎಂಬ ಅಂಕಿತದಲ್ಲ ಈತನ ೩೦ ವಚನಗಳು ನಮಗೆ ದೊರೆತಿದೆ. ಬಸವಪ್ಪ ಮತ್ತು ಕಾಳವ್ವೆ ಇವರ ಕಾಯಕ ತಿಳಿಸುವ ವಚನಗಳನ್ನು ಗಮನಿಸಿದರೆ ನಮಗೆ ಇಬ್ಬರೂ ಬಡಿಗ ಕಾಯಕದಲ್ಲಿ ತೊಡಗಿದ್ದರು ಎಂಬುದು ವೇದ್ಯವಾಗುತ್ತದೆ.

ಕಾಯಕ ಯಾವುದೇ ಆಗಿರಲಿ ಕಾಯಕದಲ್ಲಿ ತೊಡಗಿದ ಪ್ರತಿಯೊಬ್ಬರನ್ನು ಶರಣರೆಂಬ ಸಮಾನತೆಯ ನೆಲೆಯಲ್ಲಿ ನಿಲ್ಲಿಸುವ ವಿಧಾನವೇ ಶರಣ ಸಂಸ್ಕೃತಿ. ೧೨ನೇ ಶತಮಾನವೆಂದರೆ ಸಾಮಾಜಿಕ ಸುಧಾರಣೆ. ಅಂದಿನ ಸಮಾಜದ ದೋಷಗಳನ್ನು ಸರಿಪಡಿಸಲು ತಮ್ಮದೇ ಆದ ರೀತಿಯಲ್ಲಿ ತತ್ತ್ವಗಳನ್ನು ರೂಪಿಸಿಕೊಂಡವರು ಬಸವಪ್ಪ ಮತ್ತು ಕಾಳವ್ವೆ. ಬಸವ ಧರ್ಮದ ಘೋಷ ವಾಕ್ಯ ಕಾಯಕವೇ ಕೈಲಾಸ ಅಂತೆಲೇ. ಕಾಳವ್ವೆ ತಮ್ಮ ಕಾಯಕದಲ್ಲಿ ದೇವರಿದ್ದಾನೆ ಎಂದು ನಂಬಿದ್ದಳು. ತನ್ನ ಕಾಯಕದ ವಚನದಲ್ಲಿ ಎಲ್ಲಿಯೂ ಗುರು, ಲಿಂಗ, ಜಂಗಮ ಸೇವೆಯ ಬಗ್ಗೆ ಯೋಚಿಸಿಯೂ ಇರುವಂತೆ ಕಾಣುವುದಿಲ್ಲ. ಆದರೆ ನಮ್ಮ ಧಾರ್ಮಿಕ ಶಾಸ್ತ್ರಗಳು ಆಧ್ಯಾತ್ಮ ಮತ್ತು ಕಾಯಕಕ್ಕೆ ಸಂಬಂಧಪಟ್ಟಂತೆ ಸ್ವಾಮಿಗಳು, ಯೋಗಿಗಳು, ಯತಿಗಳು ಆಗುವವರು ಕಾಯಕದಿಂದ ದೂರವಿರಬೇಕು ಎಂದು ಹೇಳುತ್ತದೆ.

ದುಡಿದು ಉಣ್ಣುವುದು ಮನುಷ್ಯನ ಸಹಜ ಧರ್ಮ. ಆಹಾರ ದಕ್ಕಿಸಿಕೊಂಡ ಮಾತ್ರಕ್ಕೆ ಮನುಷ್ಯನ ಜವಬ್ದಾರಿ ಮುಗಿಯುವುದಿಲ್ಲ. ದುಡಿಮೆ ಮನುಷ್ಯನಿಗೆ ಸ್ವಾಭಿಮಾನವನ್ನು ಕಲಿಕೆ ಹಂಚಿಕೊಳ್ಳುವ, ಹಣ ದಾಸೋಹ ನಡೆಸುವ ಅವಕಾಶವನ್ನು ನೀಡುತ್ತದೆ. ಕಾಯಕದಲ್ಲಿ ನಿಷ್ಠೆ ಇರುವವರು ತಪ್ಪು ಮಾಡುವ ಪ್ರಸಂಗವೇ ಬರುವುದಿಲ್ಲ.

ವೃತ್ತಿಪರ ಪ್ರತಿಮೆಗಳೊಂದಿಗೆ ಬದುಕಿನ ಸತ್ಯ ಮತ್ತು ತತ್ತ್ವನಿಷ್ಠೆಗಳನ್ನು ಜೋಡಿಸಿ ವಚನಗಳಿಗೆ ಜೀವಂತಿಕೆ ತುಂಬಿದ ಸತಿಪತಿ ಕಾಳವ್ವೆ ಮತ್ತು ಬಸವಯ್ಯ ಕಾಯಕ ಯೋಗಿಗಳಾದ ಕಾಳವ್ವೆಯ ಮತ್ತೊಂದು ವಚನ ಹೀಗಿದೆ.

**ಕೈ ತಪ್ಪಿ ಕೆತ್ತಲು ಕಾಲಿಗೆ ಮೂಲ**
**ಮಾತು ತಪ್ಪಿ ನುಡಿಯಲು ಬಾಯಿಗೆ ಮೂಲ**
**ವ್ರತಹೀನನ ನೆರೆಯಲು ನರಕಕ್ಕೆ ಮೂಲ ಕರ್ಮಹರ ಕಾಳೇಶ್ವರಾ|| (೧೮೧)**

ಆಧುನಿಕ ಯುಗದಲ್ಲಿ ನಮಗೆ ಕಾಯಕವೆಂದರೆ ಕೆಲಸ ಬದುಕಲು ಹಣ ಸಂಪಾದಿಸುವ ಒಂದು ಮಾರ್ಗ. ಅಂದರೆ ಸಾಮಾಜಿಕ, ಆರ್ಥಿಕ, ಧಾರ್ಮಿಕ ಕ್ಷೇತ್ರದ ಎಲ್ಲಾ ಕೆಲಸಗಳು ಕಾಯಕದಲ್ಲಿ ಒಳಗೊಳ್ಳುತ್ತದೆ ಎಂಬುದು ನಮ್ಮ ಭಾವನೆ. ಆದರೆ ಕಾಳವ್ವೆಗೆ ಕಾಯಕವೆಂದರೆ ವ್ಯಕ್ತಿಯ ಮೋಕ್ಷ ಸಾಧನೆಯ ದಾರಿ. ರಾಷ್ಟ್ರದ ಅಭಿವೃದ್ಧಿಗೆ ಸಾಧನವಾಗುವ ದುಡಿಮೆಗಳನ್ನೆಲ್ಲಾ ಕಾಯಕವೆಂದು ಹೇಳಲು ಸಾಧ್ಯವಿಲ್ಲ. ದುಡಿಮೆಗಳು ಪ್ರಾಪಂಚಿಕ ಸುಖಗಳಿಗೆ ಸೀಮಿತವಾದರೆ ಅದು ಕೆಲಸ ಎನ್ನಿಸಿಕೊಳ್ಳುತ್ತದೆ. ಯಾವ ಕೆಲಸದಲ್ಲಿ ದೇವರನ್ನು ಕಾಣುತ್ತೇವೋ, ಯಾವ ಕೆಲಸವನ್ನು ನಾವು ಪೂಜಿಸುತ್ತೇವೆಯೋ, ಯಾವ ಕೆಲಸದಿಂದ ನಾವು ಆಧ್ಯಾತ್ಮಿಕತೆಯತ್ತ ಸಾಗುತ್ತೇವೆಯೋ, ಯಾವ ಕೆಲಸದಿಂದ ದಾಸೋಹ ಮಾಡುತ್ತೇವೆಯೋ, ಯಾವ ಕೆಲಸವು ಸಮಾಜಕ್ಕೆ ಕಂಟಕವಾಗದೆ ತನ್ನ ಪರಿಶ್ರಮ ಮತ್ತು ಪ್ರಮಾಣಿಕತೆಯಿಂದ ಕೂಡಿದ್ದು ಸಮಾಜ ಸೇವೆಗೆ ಮೀಸಲಾಗಿರುತ್ತದೆಯೋ, ಇದರಿಂದ ಯಾವುದೇ ರೀತಿಯಲ್ಲೂ ಮನಸ್ಸು ಮತ್ತು ದೇಹ ದುಡಿಮೆಗೆ ಹೊಂದಿಕೊಂಡು ಸಮಾಜಕ್ಕೆ ಸಹಾಯವಾಗುತ್ತದೆಯೋ ಅದು ಮಾತ್ರ ಕಾಯಕವೆನೆಸಿಕೊಳ್ಳುತ್ತದೆ. ಆ ಮೂಲಕ ನಮ್ಮ ಕಾಯಕವು ದೇವರೊಂದಿಗೆ ಸಂಪರ್ಕ ಸಾಧಿಸಿ ಪರಿಪೂರ್ಣತೆಯಾಗುತ್ತದೆ. ಆಗ ಮಾತ್ರ ಅದು ಕಾಯಕವಾಗುತ್ತದೆ. ಈ ಕಾರಣದಿಂದಲೇ ಮಹಾತ್ಮ ಗಾಂಧೀಜಿಯವರು ಕಾಯಕವನ್ನು "ಕರ್ಮ ಹಿ ಪೂಜಾ ಹೈ" ಎಂದಿದ್ಧಾರೆ.

ಈ ಕಾರಣದಿಂದಲೇ ಶಿವಶರಣೆ ಕಾಳವ್ವೆ ತಮ್ಮ ಕಾಯಕವನ್ನು ವೃತ್ತಿ ಎಂದು ಬಗೆಯದೆ ತನ್ನ ಅನುಭಾವದ ನೆಲೆಯಲ್ಲಿ ಕಾಯಕಕ್ಕೆ ತನ್ನದೇ ಮಹತ್ವ ಮತ್ತು ಗೌರವವನ್ನು ಕೊಟ್ಟು ಆಧ್ಯಾತ್ಮಿಕ ನೆಲೆಯಲ್ಲಿ ತನ್ನ ಕಾಯಕವನ್ನು ನೋಡಿದ್ದಾಳೆ. ಕಾಯಕ ಮತ್ತು ನುಡಿಯ ಮಹತ್ವವನ್ನು ತನ್ನ ವಚನದಲ್ಲಿ ಒತ್ತಿ ಹೇಳಿರುವ ಈಕೆ ವೃತ್ತಿ ಪರಿಭಾಷೆಯನ್ನು ಬಳಸಿಕೊಂಡು ದೃಷ್ಟಾಂತದೊಂದಿಗೆ ಹೇಳಿರುವ ವಚನ ಮನ ಮುಟ್ಟುವಂತೆ ಇದೆ. ಬಾಚಿ ಎಂದರೆ ಮರವನ್ನು ಕೆತ್ತಲು ಬಡಗಿಗಳು ಬಳಸುವ ಅಗಲಾದ ಬಾಯಿಯ ಕಬ್ಬಿಣದ ಸಾಧನ ಬಡಗಿಗಳಿಗೆ ಹಿಂದೆ ಬಾಚಿ ಕಾಯಕದವರು ಎನ್ನುತ್ತಿದ್ಧರು.

ಕಾಳವ್ವೆ ಯಾರೇ ಆಗಲಿ ತಮ್ಮ ಕಾಯಕದಲ್ಲಿ ಎಷ್ಟು ಎಚ್ಚರಿಕೆಯಿಂದ ಇರಬೇಕು ಎನ್ನುತ್ತಾಳೆ. ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ ಕಾಯಕವನ್ನೇ ಉಸಿರಾಗಿಸಿಕೊಂಡು ಜೀವಿಸಿದವಳು. ಈಕೆಯಂತಹ ಅನೇಕ ಶಿವಶರಣರು ರಚಿಸಿದ ವಚನಗಳು ಕಾಯಕಕ್ಕೆ ಮಾತ್ರ ಸೀಮಿತವಾಗಿರದೆ ಸಮಾಜದ ಓರೆ ಕೋರೆಗಳನ್ನು ತಿದ್ದುವ ಕೆಲಸ ಮಾಡಿತು. ವಚನಕಾರರು ತಮ್ಮ ತಮ್ಮ ಜಾತಿಯ ಕಾಯಕದಿಂದಲೇ ತಮ್ಮ

ಅನುಭವದ ಮೂಲಕ ಅನುಭಾವವನ್ನು ವ್ಯಕ್ತಪಡಿಸಿದರು. ಜೇಡರ ದಾಸಿಮಯ್ಯ, ತಳವಾರ ಕಾಮಿದೇವ, ಹಡಪದ ಅಪ್ಪಣ್ಣ, ಗಾಣಿಗರ ಕಣ್ಣಪ್ಪ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ, ಹೆಂಡದ ಮಾರಯ್ಯ, ನುಲಿಯ ಚಂದಯ್ಯ, ಅಯ್ದಕ್ಕಿ ಮಾರಯ್ಯ, ಅಯ್ದಕ್ಕಿ ಲಕ್ಕಮ್ಮ, ಸೂಳೆ ಸಂಕವ್ವ ಈ ರೀತಿಯ ಹಲವಾರು ಶಿವಶರಣರು ತಮ್ಮ ಕುಲಕಸುಬನ್ನೇ ಸಂಕೇತವಾಗಿಟ್ಟುಕೊಂಡು ವಚನಗಳನ್ನು ರಚಿಸಿದಂತೆ ಬಾಚಿ ಕಾಯಕದ ಕಾಳವ್ವೆ ಕೂಡ ತನ್ನ ಕಾಯದ ಮೂಲಕವೇ ಅಂತರಂಗ ಮತ್ತು ಬಹಿರಂಗವನ್ನು ತಿದ್ದುವ ಕೆಲಸ ಮಾಡಿ ಸಾರ್ಥಕ ಸಮಾಜ ಸುಧಾರಕಳಾದಳು.

ಬಡಿಗೆ ಕೆಲಸ ಮಾಡುವಾಗ ಕೈಯಲ್ಲಿ ಹಿಡಿದ ಕಬ್ಬಿಣದ ಸಾಧನ ಕೈ ತಪ್ಪಿದ್ದರೆ ಹರಿತವಾದ ಆಯುಧ ಕಾಲಿಗೆ ಬಿದ್ದು ಗಾಯವಾಗುತ್ತದೆ ನಾವು ಆಡುವ ಪ್ರತಿಯೊಂದು ಮಾತಿಗೂ ಬೆಲೆಯಿದೆ. ಮಾತೇ ಮುತ್ತು ಮಾತೇ ಮೃತ್ಯು ಮಾತು ತಪ್ಪಾದರೆ ಅದರ ಮೂಲ ಬಾಯಿಗೆ ತೊಂದರೆ. ನಾವು ಆಡುವ ಪ್ರತಿಯೊಂದು ಮಾತಿಗೂ ಬೆಲೆ ಕಟ್ಟಬೇಕು. ಆದ್ದರಿಂದ ಕಾಯಕದಲ್ಲಿ ಎಷ್ಟು ಎಚ್ಚರಿಕೆ ವಹಿಸಬೇಕೋ ಅದೇ ರೀತಿ ನಮ್ಮ ಬಾಯಿಂದ ಬರುವ ಪ್ರತಿ ಪದವು ನಮ್ಮ ಪ್ರಜ್ಞೆಗೆ ಒಳಪಟ್ಟಿರಬೇಕು. ಮಾತು ಬರುತ್ತೆ ಅಂತ ಅತಿಯಾಗಿ ಮಾತನಾಡಬಾರದು. ಏಕೆಂದರೆ ನಾವಾಡುವ ಮಾತು ಒಬ್ಬರನ್ನ ನಗಿಸಿದರೆ ಮತ್ತೊಬ್ಬರನ್ನು ಅಳಿಸುತ್ತೆ. ಪ್ರಿಯವಾದ ಮಾತು ಎಂಥವರಿಗೂ ಇಷ್ಟವೇ ಆಗುತ್ತದೆ. ಆದ್ದರಿಂದ ಒಳ್ಳೆಯ ಮಾತನ್ನೇ ಆಡಬೇಕು. ಕೆಲವರ ಮಾತು ಬೆಣ್ಣೆಯಲ್ಲಿ ಕೂದಲು ತೆಗೆದಂತೆ ಇರುತ್ತದೆ. ಮಾತಿನ ಪ್ರಾಮುಖ್ಯತೆಯನ್ನು ಕುರಿತು ಸರ್ವಜ್ಞ ಈ ರೀತಿ ಹೇಳುತ್ತಾರೆ.

**ಮಾತಿನಿಂ ನಗೆ ನುಡಿಯು| ಮಾತಿನಿಂ ಹಗೆ ಕೊಲೆಯು|**
**ಮಾತಿನಿಂ ಸರ್ವ ಸಂಪದವು ಲೋಕಕ್ಕೆ|**
**ಮಾತೇ ಮಾಣಿಕವು ಸರ್ವಜ್ಞ||**

ಮಾತು ಎಷ್ಟು ಪ್ರಾಮುಖ್ಯತೆಯೆಂದರೆ, ಬಾಯಿಂದ ಹೊರ ಹೊರಟ ಮಾತು ಬಿಟ್ಟ ಬಾಣದಂತೆ ಮತ್ತೆ ಹಿಂದಿರುಗಲಾರದು. ಹಾಗಾಗಿ ಆಡಬೇಕಾದ ಮಾತನ್ನು ಧ್ಯಾನವಿಟ್ಟು ಸಂದರ್ಭವರಿತು ಮುಂದಾಲೋಚಿಸಿ ಮಾತನಾಡಬೇಕು. ನಮ್ಮ ವ್ಯಕ್ತಿತ್ವದ ಸತ್ವವನ್ನೂ ಸಾಮರ್ಥ್ಯಗಳನ್ನಷ್ಟೇ ಅಲ್ಲ, ನಮ್ಮ ಗುಣಾವಗುಣಗಳನ್ನೂ ಸ್ವಭಾವ ವರ್ತನೆಗಳನ್ನೂ ಬಿಂಬಿಸುವ ಶಕ್ತಿ ಮಾತಿಗಿರುತ್ತದೆ. ಅದಕ್ಕೆ ರಾಜಾ ಭರ್ತೃಹರಿ ತುಂಬ ಅರ್ಥಪೂರ್ಣವಾಗಿ ಮಾತಿನ ಒಳ ಮರ್ಮವನ್ನು ಕುರಿತು ಹೀಗೆ ಹೇಳುತ್ತಾನೆ. “ಮನುಷ್ಯನನ್ನು ಅಂದಗೊಳಿಸುವುದು ಒಡವೆ ವಸ್ತ್ರಗಳು ಅಲ್ಲ. ಸೌಂದರ್ಯ, ಪ್ರಸಾಧನ ಲೇಪನಗಳು, ಕೇಶಾಲಂಕರಗಳೂ ಹೂಗಳು ಅಲ್ಲ. ಮನುಷ್ಯನನ್ನು ಅಂದಗೊಳಿಸುವುದು ಕೇವಲ ಅವನ ಮಾತು.” ಆದ್ದರಿಂದಲೇ ಬಸವಣ್ಣನವರು ಮಾತನ್ನು ಕುರಿತು

**ನುಡಿದರೆ ಮುತ್ತಿನ ಹಾರದಂತಿರಬೇಕು**
**ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು**
**ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು**
**ನುಡಿದರೆ ಲಿಂಗ ಮೆಚ್ಚಿ ಅಹುದೆನಬೇಕು**
**ನುಡಿಯೊಳಗಾಗಿ ನಡೆಯದಿದ್ದರೆ**

**ಕೂಡಲ ಸಂಗಮದೇವನೆಂತೊಲಿವನಯ್ಯ||**

ವ್ರತಹೀನರ ಸಂಬಂಧ ಬೆಳೆಸಿದರೆ ನಾವೇ ನಮ್ಮನ್ನು ಕಷ್ಟಕ್ಕೆ ಗುರಿ ಮಾಡಿ ಕೊಂಡಂತೆ ಯಾವ ಮನುಷ್ಯನ ನಡತೆ ಆಚಾರ ವಿಚಾರ ನೇಮ ಕೆಟ್ಟದಾಗಿರುತ್ತದೆ ಆ ವ್ಯಕ್ತಿಯ ಜೊತೆ ನಾವು ಸೇರಿದರೆ ನಾವು ಎಷ್ಟೇ ಒಳ್ಳೆಯವರಾದರೂ ನಾವು ಸಮಾಜಕ್ಕೆ ಅವರಂತೆಯೇ ಕಾಣುತ್ತೇವೆ. ಮುಂದಿನ ತೊಂದರೆಗಳಿಗೆ ನಾವೇ ದಾರಿ ಮಾಡಿಕೊಟ್ಟಂತೆ ಆಗುತ್ತದೆ. ಇಲ್ಲಿ ಕಾಯಕವನ್ನು ಕೇಂದ್ರಿಕರಿಸಿರುವ ಕಾಳವ್ವೆ ಸ್ವಾನುಭವದ ಮೂಲಕ ಹೊಸ ನಿಲುವನ್ನು ಸಮಾಜಕ್ಕೆ ತೋರಿಸಿ ಕೊಟ್ಟಿದ್ದಾಳೆ. ವರ್ಣಾಶ್ರಮದ ಕಣ್ಣಿಗೆ ಕೆಳ ಜಾತಿ ಅಥವಾ ಶೂದ್ರರಾದ ಬಾಚಿ ಕಾಯಕದ ಕಾಳವ್ವೆ ತನ್ನ ಕಾಯಕದಲ್ಲಿ ಪಾರಮಾರ್ಥಿಕ ಅರ್ಥವಂತಿಕೆಯನ್ನು ಕಟ್ಟಿಕೊಟ್ಟಳು. ಕಾಯಕದ ಅನುಭವವನ್ನು ಆಧ್ಯಾತ್ಮಿಕ ನೆಲೆಯಲ್ಲಿ ಕಾಣುವ ಪರಿ ಎಂದರೇ ಇದೇ ಎನ್ನಬಹುದು. ಮಾರ್ಟಿನ್ ಲೂಥರ್ ಕಾಯಕವನ್ನು ಉದ್ದೇಶಿಸಿ ಈ ರೀತಿಯಾಗಿ ಹೇಳುತ್ತಾನೆ. “ಮೇಲೆ ಹಾದು ಹೋಗುವ ಏಂಜಲ್ಸ್ ಸ್ವಲ್ಪ ವಿರಾಮ ಮತ್ತು ಅದನ್ನು ಮೆಚ್ಚುವ ರೀತಿಯಲ್ಲಿ ನೀವು ಕಸ ಗುಡಿಸಬೇಕು” ಎನ್ನುತ್ತಾನೆ. ಈ ಹೇಳಿಕೆಯನ್ನು ನೋಡಿದರೆ ಪ್ರತಿ ಕಾಯಕವು ಆಧ್ಯಾತ್ಮಿಕ ನೆಲೆಯಲ್ಲೇ ಇದೆ. ಇದಕ್ಕೆ ಯಾವುದೇ ಧರ್ಮದ ಹಂಗಿಲ್ಲ ಎನ್ನಬಹುದು. ಒಟ್ಟಿನಲ್ಲಿ ಕಾಯಕ ಎನ್ನುವುದು ಬದುಕಲ್ಲೊಂದು ನೆಪ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಒಕ್ಕಲಿಗ, ಕಂಬಾರ, ಮಾದಿಗ, ಕುಂಬಾರ, ಬಡಿಗ, ಹೊಲೆಯ, ಬೆಸ್ತ ಯಾರೇ ಆಗಿರಲಿ ಅವರು ತಮ್ಮ ಕಾಯಕವನ್ನು ಮನ ಮೆಚ್ಚುವಂತೆ ಮಾಡಿದರೆ ಅದೇ ಸ್ವರ್ಗ ಎನ್ನುತ್ತಾಳೆ. ಕಾಯಕ ಕುರಿತ ನುಲಿಯ ಚಂದಯ್ಯನ ವಚನ ಹೀಗಿದೆ.

**ಗುರುವಾದರೂ ಕಾಯಕದಿಂದಲೇ ಜೀವನ್ಮುಕ್ತಿ**
**ಲಿಂಗವಾದರೂ ಕಾಯಕದಿಂದಲೇ ಶಿಲೆಯ ಕುಲ ಅರಿಯುವುದು**
**ಜಂಗಮವಾದರೂ ಕಾಯಕದಿಂದಲೇ ದ್ವೇಷದ ಪಾಶ ಅರಿಯುವುದು**
**ಇದು ಚೆನ್ನ ಬಸವಣ್ಣಪ್ರಿಯ ಸಂದೇಶದ ಲಿಂಗದ ಹರಿವು||**

ಪ್ರತಿ ಶರಣನು ಕಾಯಕ ಯಾವುದಾದರೇನು? ಅದರಲ್ಲಿ ದೇವರನ್ನು ಕಾಣ ಬೇಕೆನ್ನುತ್ತಾನೆ. ಕಾಯಕದ ಮಹತ್ವವೇ ಕೈಲಾಸ. ಕಾಯಕ, ಮಾತು, ವ್ರತಗಳ ಮಹತ್ವವನ್ನು ಎರಡು ವಚನಗಳ ಮೂಲಕ ಜಗತ್ತಿಗೆ ಸಾರಿದ ಕಾಳವ್ವೆ ೧೨ನೇ ಶತಮಾನದ ಅಲಕ್ಷಿತ ವಚನಗಾರ್ತಿ. ಅನಕ್ಷರತೆಯ ಕಾಲದಲ್ಲಿ ಅಕ್ಷರ ಕಲಿತು, ಸ್ತ್ರೀ ಶೋಷಣೆಯ ಕಾಲದಲ್ಲಿ ಸ್ತ್ರೀ ಸ್ವಾತಂತ್ರ್ಯವನ್ನು ಪಡೆದು ಸತಿ-ಪತಿಗಳು ಒಂದಾಗಿ ಬದುಕಿ ಮುಂದಿನವರಿಗೆ ಆದರ್ಶ ಪ್ರಾಯಳಾದವಳು ಬಾಚಿ ಕಾಯಕದ ಕಾಳವ್ವೆ.

## ಪರಾಮರ್ಶನ ಗ್ರಂಥಗಳು:


1. ಜಯಶ್ರೀ ದಂಡೆ. (2017). ಬಾಚಿಕಾಯಕದ ಬಸವಣ್ಣ. ಸ್ನೇಹಾ ಪ್ರಿಂಟರ್ಸ್. ಬೆಂಗಳೂರು.
2. ವೀರಣ್ಣ ದಂಡೆ. (2007). ವಚನಸಾಹಿತ್ಯ ಮೀಮಾಂಸೆ. ಬಸವ ಸಮಿತಿ. ಬೆಂಗಳೂರು.
3. ವಿರೂಪಾಕ್ಷ ಬಿ. (1993). ಶರಣತತ್ವ ವಿವೇಚನೆ. ಬಸವ ಸಮಿತಿ. ಬೆಂಗಳೂರು.
4. ಲಿಂಗಪ್ಪ ಟಿ. ಹೆಚ್. (2022). ಬುದ್ಧಪ್ರಜ್ಞೆಯ ಕಾಯಕ ಜೀವಿಗಳು. ತೇಜಸ್ ಇಂಡಿಯಾ ಬುಕ್ ಹೌಸ್. ಬೆಂಗಳೂರು.
5. ಸಿದ್ಧಯ್ಯ ಪುರಾಣಿಕ. (2022).ಶರಣ ಚರಿತಾಮೃತ. ಸ್ವಪ್ನ ಬುಕ್ ಹೌಸ್. ಬೆಂಗಳೂರು.
6. ಸಿದ್ಧಣ್ಣ ಲಂಗೋಟಿ. (2022). ಮಹಾನ್ ದಾರ್ಶನಿಕ ಬಸವಣ್ಣ. ಬಸವ ಸಮಿತಿ. ಬೆಂಗಳೂರು.